ಶಿವಮೊಗ್ಗ ಜಿಲ್ಲೆಯಲ್ಲಿನ ಪ್ರವಾಸಿ ಸ್ಥಳಗಳು

2407 (3124) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಪ್ರವಾಸಿ ಸ್ಥಳಗಳು ಯಾವುವು: (ತಾಲ್ಲೂಕುವಾರು ವಿವರ ನೀಡುವುದು);

ಆ) ತೀರ್ಥಹಳ್ಳಿ ಮತ್ತು ಹೊಸನಗರದ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಗೆ ಕನಿಷ್ಠ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಬಂದಿದ್ದಲ್ಲಿ, ಯಾವಾಗ ಸೌಲಭ್ಯಗಳನ್ನು ಒದಗಿಸಲಾಗುವುದು?

ಇ) 2001–02, 2002–03ರಲ್ಲಿ ಸರ್ಕಾರ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಪ್ರವಾಸಿಗರಿಗೆ ಸೌಲಭ್ಯ ಒದಗಿಸಲು ನಿಗದಿಪಡಿಸಿದ ಮತ್ತು ಬಿಡುಗಡೆಯಾದ ಹಣ ಎಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ)

ತಾಲ್ಲೂಕು	ಸ್ಥಳಗಳು
ಶಿವಮೊಗ್ಗ	ಗಾಜನೂರು, ಕೂಡ್ಲಿ, ತ್ಯಾವರೆಕೊಪ್ಪ
ತೀರ್ಥಹಳ್ಳಿ	ತೀರ್ಥಹಳ್ಳಿ, ಕಳಲೆ ದುರ್ಗ, ಅಂಬುತೀರ್ಥ, ಆಗುಂಬೆ, ಮಂಡಗದ್ದೆ ಪಕ್ಷಿಧಾಮ, ಕುಂದಾದ್ರಿ ಮಾರೀಚ ಮೃಗವಧೆ, ಕುಪ್ಪಳ್ಳಿ
ಸಾಗರ	ಇಕ್ಕೇರಿ, ಜೋಗ್‌ಫಾಲ್ಸ್, ವರದಮೂಲ, ಕೆಳದಿ
ಹೊಸನಗರ	ನಗರ, ಹುಮ್ಮ ಕೂಡಚಾದ್ರಿ
ಭದ್ರಾವತಿ	ಭದ್ರಾವತಿ
ಶಿಕಾರಿಪುರ	ತೊಗರ್ಸಿ, ಬಳ್ಳಿಗಾವಿ, ಉಡುತಡಿ
ಚನ್ನಗಿರಿ	ಶಾಂತಿ ಸಾಗರ, ಚನ್ನಗಿರಿ, ಸಂತೆ ಬೆನ್ನೂರು
ಸೊರಬ	ಸೋರಬ, ಚಂದ್ರಗುತ್ತಿ
ಹೊನ್ನಾಳಿ	ತೀರ್ಥರಾಮೇಶ್ವರ

ಆ) ಬಂದಿಲ್ಲ.

ಇ) 2001–02 ಮತ್ತು 2002–03ನೇ ಸಾಲಿನಲ್ಲಿ ಈ ಕೇಂದ್ರಗಳಲ್ಲಿ ಪ್ರವಾಸಿ ಸೌಲಭ್ಯ ಒದಗಿಸಲು ಹಣ ಒದಗಿಸಿರುವುದಿಲ್ಲ.

ಶಿವಮೊಗ್ಗ ತೀರ್ಥಹಳ್ಳಿ ನಡುವೆ ರಸ್ತೆ ಕಾಮಗಾರಿ

2408 (3125) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ–ತೀರ್ಥಹಳ್ಳಿ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಷ್ಟು ಕಿಮೀ ರಸ್ತೆ ಕಾಮಗಾರಿ ಬಾಕಿ ಇದೆ;

ಆ) ಈ ಸಾಲಿನಲ್ಲಿ ಈ ಕಾಮಗಾರಿಗೆ ನಿಗಧಿಪಡಿಸಿದ ಹಣ ಎಷ್ಟು: ಬಿಡುಗಡೆಯಾದ ಹಣ ಎಷ್ಟು?